# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 574 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ ರಾಥೋಡ್<br>(ನಾಮನಿರ್ದೇಶನ ಹೊಂದಿರುವವರು) |
| ಉತ್ತರಿಸಬೇಕಾದ ದಿನಾಂಕ | : | 23.12.2022 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿ. |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಭತ್ತ ಮತ್ತು ರಾಗಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಎಷ್ಟು ಪ್ರೋತ್ಸಾಹಧನವನ್ನು ನೀಡಲಾಗಿರುತ್ತಿದೆ; ಗರಿಷ್ಟ ಮಟ್ಟದ ಖರೀದಿಯನ್ನು ನಿಗಧಿಪಡಿಸಲಾಗಿದೆಯೇ;</td><td>ಕೇಂದ್ರ ಸರ್ಕಾರವು 2022-23 ನೇ ಸಾಲಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗುವ ಭತ್ತ ಮತ್ತು ರಾಗಿಗೆ ಈ ಕೆಳಗಿನಂತೆ ದರ ಹಾಗೂ ಪ್ರಮಾಣವನ್ನು ನಿಗದಿಪಡಿಸಿದೆ.
<table>
<tr><th>ಆಹಾರಧಾನ್ಯ</th><th>ಪ್ರಮಾಣ(ಲಕ್ಷ ಮೆಟ್ರಿಕ್ ಟನ್ ಗಳಲ್ಲಿ)</th><th>ದರ</th></tr>
<tr><td>ಭತ್ತ (ಸಾಮಾನ್ಯ )</td><td rowspan="2">5.00</td><td>2040</td></tr>
<tr><td>ಭತ್ತ (ಗ್ರೇಡ್-ಎ)</td><td>2060</td></tr>
<tr><td>ರಾಗಿ</td><td>5.00</td><td>3578</td></tr>
</table>
ರಾಜ್ಯದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯಡಿ ಕುಚ್ಚಲಕ್ಕಿಯನ್ನು ವಿತರಿಸುವಂತೆ ಪಡಿತರ ಫಲಾನುಭವಿಗಳ ಬೇಡಿಕೆ ಇರುತ್ತದೆ. ಈ ಹಿನ್ನಲೆಯಲ್ಲಿ ಸ್ಥಳೀಯವಾಗಿ ಬೆಳೆಯುವ ತಳಿಗಳ ಭತ್ತವನ್ನು ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿ ಸದರಿ ಭತ್ತವನ್ನು ಕುಚ್ಚಲಕ್ಕಿಯನ್ನಾಗಿ ಪರಿವರ್ತಿಸಿ 03 ಜಿಲ್ಲೆಗಳಲ್ಲಿನ ಪಡಿತರ ಫಲಾನುಭವಿಗಳಿಗೆ ವಿತರಿಸಲು ಕೇಂದ್ರ ಸರ್ಕಾರವು ಅನುಮತಿಯನ್ನು ನೀಡಿರುತ್ತದೆ. ಈ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬೆಳೆಯುವ ಕುಚ್ಚಲಕ್ಕಿಯನ್ನಾಗಿ ಪರಿವರ್ತಿಸಬಹುದಾದ</td></tr>
</table>

| | | |
|---|---|---|
| | | ಸ್ಥಳೀಯ ತಳಿಗಳಾದ ಜಯಾ, ಜ್ಯೋತಿ, ಕಜೆ, ಸಹ್ಯಾದ್ರಿ, ಅಭಿಲಾಷ, ಉಮಾ ಮತ್ತು MO4 ಭತ್ತವನ್ನು ಸ್ಥಳೀಯ ರೈತರಿಂದ ಖರೀದಿಸಿ ಕುಚ್ಚಲಕ್ಕಿಯನ್ನಾಗಿ ಪರಿವರ್ತಿಸುವ ಸಲುವಾಗಿ ರಾಜ್ಯ ಸರ್ಕಾರವು ಸದರಿ ತಳಿಗಳ ಭತ್ತಕ್ಕೆ ಪ್ರತಿ ಕ್ವಿಂಟಾಲ್‌ಗೆ ರೂ.500/-ಗಳ ಪ್ರೋತ್ಸಾಹಧನವನ್ನು ನಿಗಧಿಪಡಿಸಿದೆ.<br>ರಾಜ್ಯದ ಉಳಿದ ಭಾಗಗಳಲ್ಲಿ ಕುಚ್ಚಲಕ್ಕಿ ಉತ್ಪಾದನೆ ಹಾಗೂ ಬಳಕೆಗೆ ಅವಕಾಶವಿಲ್ಲದ ಕಾರಣ ಈ ಪ್ರದೇಶಗಳಿಗೆ ಸದರಿ ಯೋಜನೆಯನ್ನು ವಿಸ್ತರಿಸಿರುವುದಿಲ್ಲ. |
| (ಆ) | ಬೆಂಬಲ ಬೆಲೆಗೆ ಬಿಡುಗಡೆ ಮಾಡಿರುವ ಹಣವೆಷ್ಟು; (ವಿವರನೀಡುವುದು) | ರೈತರ ಸರಬರಾಜು ಮಾಡುವ ಆಹಾರ ಧಾನ್ಯಗಳ ಪ್ರಮಾಣಕ್ಕೆ ಅನುಗುಣವಾಗಿ ಅನುದಾನವನ್ನು ಒದಗಿಸಲಾಗುತ್ತದೆ. |
| (ಇ) | ಕನಿಷ್ಟ ಬೆಂಬಲ ಬೆಲೆ ನೀಡುವಲ್ಲಿ ವಲಯವಾರು ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವಕ್ರಮಗಳೇನು? | ಅಂಶ (ಅ) ರಲ್ಲಿ ವಿವರಿಸಿರುವಂತೆ. |

ಆಸಾಪ 197 ಆರ್ ಪಿ ಆರ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ